**<u>ದಿನಾಂಕ 30-07-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ಪ್ರತಿವಾದಿ-3, 5, 7 ಮತ್ತು 8 ಪರವಾಗಿ</u>**

1. ಈ ದಾವೆಯನ್ನು ಯಾರ ವಿರುದ್ದ ಸಲ್ಲಿಸಿದ್ದೀರಿ ಎಂದರೆ ರಾಮಣ್ಣ ಮತ್ತು ಹಣಮಂತ ಅವರ ವಿರುದ್ದ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿದ್ದೀರಿ ಎಂದರೆ ವಿಭಾಗ ಆಗಿಲ್ಲ ಎಂದು ದಾವೆ ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದೀರಿ ಎಂದರೆ ಸರ್ವೆ ನಂ.62 ಮತ್ತು 67 ಎಂದು ಸಾಕ್ಷಿ ಹೇಳುತ್ತಾರೆ. ವಾದಿಗಳಾದ ನೀವು ಮತ್ತು 1 ನೇ ಪ್ರತಿವಾದಿ ಏಕತ್ರವಾಗಿ ಇದ್ದೀರಿ ಎಂದರೆ ಸರಿ. 3 ನೇ ಪ್ರತಿವಾದಿ ರಾಮಣ್ಣ ಮತ್ತು 5 ನೇ ಪ್ರತಿವಾದಿ ಹಣಮಂತ ಇವರು ಪ್ರತ್ಯೇಕವಾಗಿ ಇದ್ದಾರೆ ಎಂದರೆ ಸರಿ. ಕಳೆದ 40 ರಿಂದ 45 ವರ್ಷಗಳಿಂದ ಸದರಿ ರಾಮಣ್ಣ ಮತ್ತು ಹಣಮಂತ ಇವರು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ, ಕಳೆದ 10 ರಿಂದ 15 ವರ್ಷಗಳಿಂದ ಎಂದು ಸಾಕ್ಷಿ ಹೇಳುತ್ತಾರೆ.

2. ಮೂಲ ಪುರುಷ ಅಡಿವೆಪ್ಪ 1993 ರಲ್ಲಿ ತೀರಿಕೊಂಡರು ಎಂದರೆ ಸರಿ. ಪ್ರತಿವಾದಿ-1 ಮತ್ತು ಪ್ರತಿವಾದಿ-3 ರಿಂದ ಪ್ರತಿವಾದಿ-6 ರವರು ಅಡಿವೆಪ್ಪ ಅವರ ಮಕ್ಕಳು ಎಂದರೆ ಸರಿ. ಗೌರವ್ವ 6 ಪ್ರತಿವಾದಿಯವರನ್ನು ಹೊರತುಪಡಿಸಿ ಉಳಿದವರ ಹೆಸರು ಸರ್ವೆ ನಂಬರ 12/1 ಮತ್ತು 80/2 ಹಾಗೂ ಜಾಡರಅರಳಿಕಟ್ಟಿ ಗ್ರಾಮದ 62/2 ಮತ್ತು 62/3 ಗಳಿಗೆ ದಾಖಲಾಯಿತು ಎಂದರೆ ಎಲ್ಲರ ಹೆಸರು ದಾಖಲಾಗಿದೆ ಎಂದು ಹೇಳುತ್ತಾರೆ. 1994 ರಿಂದ ಇಲ್ಲಿಯವರೆಗೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ವಾದಿ ಮತ್ತು ಪ್ರತಿವಾದಿಳಾದ ನೀವೆಲ್ಲರೂ ನೋಡಿಕೊಂಡು ಬಂದಿದ್ದೀರಿ ಎಂದರೆ ಸರಿ. ನಿಮ್ಮ ತಂದೆ 1 ನೇ ಪ್ರತಿವಾದಿಯವರು ಒಳ್ಳೆಯ ಸ್ವಭಾವ ಮತ್ತು ಸಂಭಾಯಿತರು ಎಂದರೆ ಸರಿ. ನಿಮ್ಮ ತಂದೆಗೆ ಯಾವುದೇ ದುಶ್ಚಟಗಳು ಮತ್ತು ಅನೈತಿಕ ಸಂಬಂಧ ಇಲ್ಲ ಎಂದರೆ ಅವರಿಗೆ ಕುಡಿಯುವ ಚಟ ಇದೆ ಎಂದು ಹೇಳುತ್ತಾರೆ. ಆ ರೀತಿ ನಿಮ್ಮ ಪ್ರಕಾರ ವ್ಯಸನಿ ಆಗಿದ್ದಾರೆ ಎಂದು ನಿಮ್ಮ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆಯಾ ಎಂದರೆ ನಮೂದಿಸಲಾಗಿದೆ ಎಂದು ಹೇಳುತ್ತಾರೆ. ದಾವೆ 2020 ರಲ್ಲಿ ಸಲ್ಲಿಸಿದಾಗ ನೀವು ಆ ರೀತಿ 1 ನೇ ಪ್ರತಿವಾದಿ ನಿಮ್ಮ ಪ್ರಕಾರ ವ್ಯಸನಿ ಇದ್ದ ಎಂದು ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ನಿಮ್ಮ ತಂದೆ 1 ನೇ ಪ್ರತಿವಾದಿಯವರಿಗೆ ಕಡಿಮೆ ಪಾಲು ನೀಡಿದ್ದಾರೆ ಎಂದು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. ಆ ರೀತಿ ನಿಮ್ಮ ಪ್ರಕಾರ ಕಡಿಮೆ ಪಾಲು ನೀಡಿದ್ದಾರೆ ಎಂದು ನೀವು ಈ ದಾವೆಯನ್ನು ವಿಭಾಗ ಕೋರಿ ಸಲ್ಲಿಸಿದ್ದೀರಿ ಎಂದರೆ ಸರಿ.

3. ಯಾವ ದಾಖಲಾತಿ ಆಧಾರದ ಮೇಲೆ ನೀವು ನಿಮ್ಮ ಪ್ರಕಾರ ನಿಮ್ಮ ತಂದೆಗೆ ಕಡಿಮೆ ಪಾಲು ನೀಡಿದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸರ್ವೆ ನಂ.62 ರ ಉತಾರೆ ತೆಗೆದು ನೋಡಿದಾಗ ಉತಾರೆಯಲ್ಲಿ ತಂದೆಯ ಹೆಸರು ಇಲ್ಲದ ಕಾರಣ ಹೇಳಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ನಿಮ್ಮ ತಂದೆಯ ಹೆಸರು ಸರ್ವೆ ನಂ.62 ರ ಪಹಣಿ ಪತ್ರಿಕೆಯಲ್ಲಿ ಇಲ್ಲ ಎಂದು ಗೊತ್ತಾಯಿತು ಎಂದರೆ 2020 ರಲ್ಲಿ ಎಂದು ಸಾಕ್ಷಿ ಹೇಳುತ್ತಾರೆ. ನೀವು ಯಾವ ಕಾಲಕ್ಕೂ ಪಹಣಿ ಪತ್ರಿಕೆಗಳನ್ನು ನೋಡಿಲ್ಲ, ಕೇವಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅಡಿವೆಪ್ಪ ಅವರು ತೀರಿಕೊಂಡ ನಂತರ ಅವರ ಗಂಡು ಮಕ್ಕಳು 2001 ರವರೆಗೆ ಏಕತ್ರ ಕುಟುಂಬದಲ್ಲಿ ಕೂಡಿಕೊಂಡು ಇದ್ದರು ಎಂದರೆ ಸರಿ. 2001 ರಲ್ಲಿ ಅಡಿವೆಪ್ಪ ಅವರ ಗಂಡು ಮಕ್ಕಳು ತಮ್ಮ ತಮ್ಮ ನಡುವೆ ವಿಭಾಗ ಮಾಡಿಕೊಂಡು ಸದರಿ ವಿಭಾಗದಂತೆ ಪಹಣಿ ಪತ್ರಿಕೆಗಳಲ್ಲಿ ಹೆಸರು ಹಚ್ಚಿಕೊಂಡರು ಎಂದರೆ ಯಾವುದೇ ವಿಭಾಗ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ತಂದೆ ಫಕೀರಪ್ಪ ಅವರಿಗೆ 2001 ರಲ್ಲಿ ಆದ ವಿಭಾಗ ಪತ್ರದ ಬಗ್ಗೆ ಮಾಹಿತಿ ಇತ್ತು ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗಳಾದ ನಾವು ಮತ್ತು 1 ನೇ ಪ್ರತಿವಾದಿ ಮಲ್ಲಾಪೂರ ಪಿ.ಎಲ್ ನಲ್ಲಿ ವಾಸಿಸುತ್ತೇವೆ. ವಿಭಾಗ ಆದಾಗಿನಿಂದ ನೀವು, ನಿಮ್ಮ ತಂದೆ ಮತ್ತು ನಿಮ್ಮ ತಾಯಿ ಎಲ್ಲರೂ ಕೂಡಿ ಅದೇ ಮನೆಯಲ್ಲಿ ವಾಸಿಸುತ್ತೀರಿ ಎಂದರೆ ಸರಿ. ಸದರಿ ವಿಭಾಗದಂತೆ ರಾಮಣ್ಣ ಅವರ ಪಾಲಿಗೆ ಸರ್ವೆ ನಂ.62/2 ರ 2 ಏಕರೆ 23 ಗುಂಟೆ ಆಸ್ತಿಯಲ್ಲಿ ಉತ್ತರದ 2 ನೇ ಪಟ್ಟಿ 1 ಏಕರೆ ಮತ್ತು 62/3 2 ಏಕರೆ 14 ಗುಂಟೆ ಪೈಕಿ ಉತ್ತರದ 2 ನೇ ಪಟ್ಟಿ 36 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಸದರಿ ವಿಭಾಗದಂತೆ ತಿಪ್ಪಣ್ಣ ಅವರ ಪಾಲಿಗೆ ಸರ್ವೆ ನಂ.62/2 ರ 2 ಏಕರೆ 23 ಗುಂಟೆ ಆಸ್ತಿಯಲ್ಲಿ ಉತ್ತರದ 3 ನೇ ಪಟ್ಟಿ 23 ಗುಂಟೆ ಮತ್ತು 62/3 2 ಏಕರೆ 14 ಗುಂಟೆ ಪೈಕಿ ಉತ್ತರದ 3 ನೇ ಪಟ್ಟಿ 23 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಸದರಿ ವಿಭಾಗದಂತೆ ಹಣಮಂತ ಅವರ ಪಾಲಿಗೆ ಸರ್ವೆ ನಂ.62/2 ರ 2 ಏಕರೆ 23 ಗುಂಟೆ ಆಸ್ತಿಯಲ್ಲಿ ಉತ್ತರದ 1 ನೇ ಪಟ್ಟಿ 12 ಗುಂಟೆ ಮತ್ತು ದಕ್ಷಿಣ ಭಾಗ 28 ಗುಂಟೆ ಮತ್ತು ಮತ್ತು 62/3 2 ಏಕರೆ 14 ಗುಂಟೆ ಪೈಕಿ ಉತ್ತರದ 1 ನೇ ಪಟ್ಟಿ 12 ಗುಂಟೆ ಮತ್ತು ದಕ್ಷಿಣ ಭಾಗ 23 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಅದೇ ರೀತಿ ಮಲ್ಲಾಪೂರ ಪಿ.ಎಲ್ ಗ್ರಾಮದ ಜನತಾ ಮನೆ ಪೂರ್ತಿ ನಿಮ್ಮ ತಂದೆಯ ಪಾಲಿಗೆ ಬಂದಿತು ಎಂದರೆ ಸರಿ. 2001 ರಲ್ಲಿ ಆದ ವಿಭಾಗದಂತೆ ಅವರವರ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಯಿತು ಎಂದರೆ ಸರಿ. ಸದರಿ 2001 ರಲ್ಲಿ ಆದ ವಿಭಾಗದಂತೆ ನೀವು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇದ್ದೀರಿ ಎಂದರೆ ಸರಿಯಲ್ಲ. ಜಂಟಿ ಸ್ವಾಧೀನಾನುಭವದಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಿಃ27.11.2001 ರ ವಿಭಾಗ ಪತ್ರವನ್ನು ತೋರಿಸುತ್ತಿದ್ದು ಅದರಂತೆ ವಿಭಾಗ

ಮಾಡಿಕೊಂಡಿದ್ದಾರೆ ಎಂದರೆ ಸರಿ ಎಂದು ಸಾಕ್ಷಿ ಹೇಳುತ್ತಾರೆ.

(L/adv for the defendant seek for marking of the said document. On perusal of the said document it can be seen that by virtue of the said document rights are created in favour of the parties and therefore it requied compulsory registration as held by Hon'ble Apex Court in catena of decisions and hence the said documents though confronted and admitted is not marked at this stage).

4. ಸದರಿ 2001 ರ ವಿಭಾಗ ಪತ್ರದಂತೆ ಎಲ್ಲರೂ ಸ್ವಾಧೀನಾನುಭವದಲ್ಲಿ ಇದ್ದು, ಅದರಂತೆಯೇ ಎಲ್ಲರೂ ನಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 2004 ರಲ್ಲಿ ಸರ್ವೆ ನಂ.80/2 ಕ್ಕೆ ಸಂಬಂಧಿಸಿದಂತೆ 1 ನೇ ಪ್ರತಿವಾದಿ ಮತ್ತು 3 ರಿಂದ 6 ನೇ ಪ್ರತಿವಾದಿಯವರು ಯಲ್ಲಪ್ಪ ವಿಠ್ಠಲಪ್ಪ ಪೂಜಾರಿ ಎಂಬ ನಿಮ್ಮ ಸಂಬಂಧಿಕರೊಂದಿಗೆ ವಿಭಾಗ ಮಾಡಿಕೊಡಿಂದ್ದು, ಸದರಿ ವಿಭಾಗದಲ್ಲಿ ಸರ್ವೆ ನಂ.80/2 ರ ಆಸ್ತಿ ಯಲ್ಲಪ್ಪ ವಿಠ್ಠಲ್ಲಪ್ಪ ಪೂಜಾರಿ ಅವರ ಪಾಲಿಗೆ ಬಂದಿತು ಎಂದರೆ ಸರಿ. ಡೈರಿ ಉತಾರೆಯಲ್ಲಿ ಅವರ ಹೆಸರು ನಮೂದು ಆಯಿತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ |